

‘50 ಅಂತಸ್ತಿನ ಕಟ್ಟಡ ನಿರ್ಮಿಸಬಹುದೇ ವಿನಾ ಒಂದು ಸಂಪ್ರದಾಯ, ಪರಂಪರೆಯನ್ನು ಮತ್ತೆ ಕಟ್ಟಲು ಸಾಧ್ಯವಾಗುವುದಿಲ್ಲ’ ಎಂಬ ಮಾತಿದೆ. ಬದಲಾಗುತ್ತಿರುವ ಸಾಂಸ್ಕೃತಿಕ ರಾಜಧಾನಿ ಮೈಸೂರಿನ ಜಾಡು ಹಿಡಿದು ಹೊರಟಾಗ ಮತ್ತೆ ಈ ಮಾತು ನೆನಪಾಯಿತು. ಹೌದು, ಮೈಸೂರಿನ ವಿಚಾರದಲ್ಲಿ ಇಂಥದ್ದೊಂದು ಆತಂಕ, ಜಿಜ್ಞಾಸೆ ಶುರುವಾಗಿದೆ.

ಮೈಸೂರು ಎಂದರೆ ವೈಭವ ಹಾಗೂ ವೈವಿಧ್ಯದ ಪ್ರತೀಕ. ಕಲೆ, ಸಂಸ್ಕೃತಿ, ಸಂಗೀತ, ಯೋಗದ ಆಶ್ರಯದಾತ. ಶ್ರೀಮಂತ ಪರಂಪರೆ ಮತ್ತು ಭವ್ಯ ಅರಮನೆಗಳ ನಾಡು. ದಸರೆ ಉತ್ಸವದಿಂದಲೇ ಸಾಕಷ್ಟು ಪ್ರಸಿದ್ಧಿ ಪಡೆದಿದೆ. ಅರಸರ ಆಳಿದ ಊರು, ಇಂದಿನ ಆಧುನಿಕ ಸಂಸ್ಕೃತಿಗೆ ಸಿಲುಕಿ ನಲುಗುತ್ತಿದೆಯೇನೋ? ಅತ್ತ ಪರಂಪರೆ ಇತ್ತ ಬೆಳವಣಿಗೆ ಎಂಬ ಅಡಕತ್ತರಿಯಲ್ಲಿ ಸಿಲುಕಿದೆಯೇನೋ ಎಂಬೆಲ್ಲಾ ಪ್ರಶ್ನೆಗಳು ಮೂಡುತ್ತಿದೆ. ದರೋಡೆ, ಅತ್ಯಾಚಾರದಂಥ ಪ್ರಕರಣಗಳು ನಿವೃತ್ತರ ಸ್ವರ್ಗವನ್ನು ನಡುಗಿಸುವಂತಿವೆ.

ಸಾಂಪ್ರದಾಯಿಕ ಮತ್ತು ಆಧುನಿಕ ಆಕರ್ಷಣೆಗಳ ಅದ್ಭುತ ಮಿಶ್ರಣದಂತೆ ಮೈಸೂರು ಭಾಸವಾಗುತ್ತಿದೆ. ಮೈಲಾರಿ ಹೋಟೆಲ್‌ನ ಮಸಾಲೆ ದೋಸೆಯ ಘಮಲು ಮೂಗಿಗೆ ಬಡಿಯುತ್ತಿದ್ದಂತೆ, ಅರಸು ರಸ್ತೆಯ ಪಿಜ್ಜಾ–ಬರ್ಗರ್ ಮಳಿಗೆ ಕೈ ಬೀಸಿ ಕರೆಯುತ್ತದೆ. ಮೈಸೂರು ಮಲ್ಲಿಗೆ ಖರೀದಿಸಲು ಅಗ್ರಹಾರ ಸರ್ಕಲ್‌ನಲ್ಲಿ ನಿಂತರೆ, ಎದುರಲ್ಲೇ ದೊಡ್ಡದಾಗಿ ಬೋರ್ಡ್‌ನಲ್ಲಿ ಬರೆದುಕೊಂಡಿರುವ ವಿದೇಶಿ ಸೆಂಟಿನ ಬಾಟಲಿ ಅಂಗಡಿ ಕಾಣುತ್ತದೆ! ಶತಮಾನದ ಇತಿಹಾಸವಿರುವ, ಮಹಾರಾಜರು ಸ್ಥಾಪಿಸಿದ ಮೈಸೂರು ವಿಶ್ವವಿದ್ಯಾಲಯದ ಸುತ್ತ ಅಣಬೆಯಂತೆ ಹುಟ್ಟಿಕೊಳ್ಳುತ್ತಿರುವ ವಿಶ್ವವಿದ್ಯಾಲಯಗಳು, ಶಿಕ್ಷಣ ಸಂಸ್ಥೆಗಳು ವಿದ್ಯಾರ್ಥಿಗಳನ್ನು ಆಕರ್ಷಿಸುತ್ತಿವೆ. ಐತಿಹಾಸಿಕ ಹಿನ್ನೆಲೆ ಹೊಂದಿರುವ ಸರಸ್ವತಿ, ಶಾಂತಲಾ, ಲಕ್ಷ್ಮಿ ಥಿಯೇಟರ್‌ಗಳು ಮುಚ್ಚುತ್ತಿದ್ದರೆ ಮಾಲ್ ಆಫ್ ಮೈಸೂರು, ಫೋರಂ ಮಾಲ್ ಸಿನಿ ಪ್ರಿಯರನ್ನು ಕೈಬೀಸಿ ಕರೆಯುತ್ತಿವೆ. ಕಳೆ ಬೆಳೆದುಕೊಂಡು ಅನಾಥವಾಗಿ ಬಿದ್ದಂತಿರುವ ಹಳೇ ಕಟ್ಟಡದ ಪಕ್ಕದಲ್ಲೇ ಅಪಾರ್ಟ್‌ಮೆಂಟು!

ಇದು ನವ ಮೈಸೂರು! ಪರಂಪರೆಯ ಸೊಗಡಿನ ಜೊತೆಜೊತೆಗೆ ಆಧುನಿಕತೆಯನ್ನು ಬಲವಾಗಿ ಅಪ್ಪಿಕೊಳ್ಳುತ್ತಿರುವ ಸಾಂಸ್ಕೃತಿಕ ನಗರಿ. ಉಳಿದೆಲ್ಲಾ ನಗರಗಳಂತೆ ಮೈಸೂರು ನಗರ ಕೂಡ ವೇಗವಾಗಿ ಬೆಳೆಯುತ್ತಿದೆ, ಬಹುಮಹಡಿ ಕಟ್ಟಡಗಳು ತಲೆ ಎತ್ತುತ್ತಿವೆ, ಜನಸಂಖ್ಯೆ ಜೊತೆಗೆ ವಾಹನಗಳ ಸಂಖ್ಯೆಯೂ ಹೆಚ್ಚುತ್ತಿದೆ. ಬೆಂಗಳೂರನ್ನು ಕೇವಲ 90 ನಿಮಿಷಗಳಲ್ಲಿ ತಲುಪಬಹುದಾದ ದಶಪಥ ಹೆದ್ದಾರಿ–ಆರ್ಥಿಕ ಕಾರಿಡಾರ್ ಅಭಿವೃದ್ಧಿಪಡಿಸಲಾಗುತ್ತಿದೆ. ಮೈಸೂರು–ಚೆನ್ನೈ